**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ,**
**ಬಸವನ ಬಾಗೇವಾಡಿ.**

ಸಿಸಿ ನಂ: 658/2018

ಸಿಡಬ್ಲ್ಯೂ: 15 ಪಿಡಬ್ಲ್ಯೂ: 6

| | | |
|---|---|---|
| ಸಾಕ್ಷಿದಾರರ ಹೆಸರು | ವಿಠ್ಠಲ ಮಡಿವಾರ | |
| ತಂದೆ/ಗಂಡನ ಹೆಸರು | ಮಡಿವಾಳಪ್ಪ | |
| ವಯಸ್ಸು | 35 | ವರ್ಷ |
| ಉದ್ಯೋಗ | ಸಿಪಾಯಿ ಹಣಮಾಪೂರ ಗ್ರಾಮ ಪಂಚಾಯತಿ | |
| ವಾಸಸ್ಥಳ | ಹಣಮಾಪೂರ | |

**ಸಾಕ್ಷಿಯನ್ನು ಇಂದು ದಿನಾಂಕ: 11.05.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ**

**1.** ನಾನು **2014** ರಿಂದ ಇಲ್ಲಿಯವರೆಗೆ ಹಣಮಾಪೂರ ಗ್ರಾಮ ಪಂಚಾಯತಿಯಲ್ಲಿ ಸಿಪಾಯಿ ಅಂತ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

**2.** ದಿನಾಂಕ. **27.08.2017** ರಂದು ಬೆಳಿಗ್ಗೆ **05.30** ಗಂಟೆಗೆ ನಾನು ನಮ್ಮ ಮನೆಯಲ್ಲಿ ಇದ್ದಾಗ ಚಾಸಾ**-1** ರವರು ನನಗೆ ಫೋನ ಮಾಡಿ ಮಟ್ಟಿಹಾಳ ಕ್ರಾಸದಲ್ಲಿ ಮಟ್ಟಿಹಾಳ ಕ್ರಾಸ್ ಗೆ ಬರುವಂತೆ ತಿಳಿಸಿರುತ್ತಾರೆ. ನಂತರ ನಾನು ಸದರಿ ಸ್ಥಳಕ್ಕೆ ಹೋದಾಗ ಚಾಸಾ-**1,12, 13,14,16** ಮತ್ತು **17** ರವರು ಇದ್ದರು. ಗಲಾಟೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

<u>ಪಾಟೀ ಸವಾಲು ಎ.ಪಿ.ಪಿ ವಕೀಲರಿಂದ</u>

**1.** ದಿಃ **27.08.2017** ರಂದು ಬೆಳಿಗ್ಗೆ **04.00** ರಿಂದ **06.00** ಗಂಟೆಯ ಮಧ್ಯದ ಅವಧಿಯಲ್ಲಿ ಆರೋಪಿತರು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ಕಾನೂನು ಬಾಹಿರವಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು ಮಟ್ಟಿಹಾಳ ಕ್ರಾಸ್ ನಲ್ಲಿ ಒಂದು ಧ್ವಜದ ಕಟ್ಟೆಯನ್ನು ಕಟ್ಟಿ ಅದರ ಮೇಲೆ ನೀಲಿ ಬಣ್ಣದ ಧ್ವಜವನ್ನು ಹಾರಿಸಲಾಗಿತ್ತು ಎಂದರೆ ಸಾಕ್ಷಿಯು ನನಗೆ ಆ ಕುರಿತು ನನಗೆ ಗೊತ್ತಿರುವುದಿಲ್ಲ ಮತ್ತು ಹೋಗುವುದರಲ್ಲಿ ತೆಗೆಯಲಾಗಿತ್ತು ಎಂದು ಹೇಳುತ್ತಾರೆ. ನಂತರ ಚಾಸಾ-**1,16** ಮತ್ತು **17** ರವರು ಆರೋಪಿತರಿಗೆ ಧ್ವಜದ ಕಟ್ಟೆಯನ್ನು ತೆಗೆಯುವಂತೆ ಹೇಳಿದಾಗ ಅವರುಗಳು ಚಾಸಾ-**1,16** ಮತ್ತು **17** ರವರೊಂದಿಗೆ ಅಸಭ್ಯ ರೀತಿಯಲ್ಲಿ ವರ್ತಿಸಿ ಅವಾಚ್ಯ ಶಬ್ದಗಳಿಂದ ಬೈದು ಅವರಿಗೆ ತಳ್ಳಲು ಪ್ರಯತ್ನಿಸಿರುತ್ತಾರೆ ಮತ್ತು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ನಾವುಗಳು ಮತ್ತು ಸಿಬ್ಬಂದಿಗಳು ಎಲ್ಲರೂ ಸೇರಿ ಸದರಿ ಧ್ವಜದ ಕಟ್ಟೆಯನ್ನು ತೆರವುಗೊಳಿಸಿರುತ್ತೇವೆ ಎಂದರೆ ಸರಿಯಲ್ಲ.

**2.** ಈ ಕುರಿತು ಚಾಸಾ-**1** ರವರು ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

3. ನಾನು ದಿಃ **03.09.2017** ರಂದು ಈ ಘಟನೆಯ ಕುರಿತು ಹೇಳಿಕೆಯನ್ನು ಪೋಲಿಸರ ಮುಂದೆ ನೀಡಿರುತ್ತೇನೆ ಎಂದರೆ ಸರಿಯಲ್ಲ**.** ಸಾಕ್ಷಿಯು ಅಲ್ಲಗಳೆದ ಹೇಳಿಕೆ ಭಾಗವನ್ನು ನಿಪಿ**-3** ಎಂದು ಗುರುತಿಸಲಾಯಿತು**.** ನನಗೆ ನಿಪಿ**-3** ರಲ್ಲಿ ಬರೆದಿರುವ ಅಂಶಗಳು ಗೊತ್ತಿದ್ದರೂ ಕೂಡಾ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ**.**

**<u>ಪಾಟೀ ಸವಾಲು:- ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ</u>**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**1 ನೇ ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**